ಒಳಬಾಗಿಲ ಮೇಲೆ ನನ್ನ ಬೆನ್ನ ಗುರುತಿನ ಪಕ್ಕದಲ್ಲೇ ಇರಬಹುದಾದ ಅವನ ಅಂಗೈ ಗುರುತನ್ನು ಹುಡುಕುತ್ತವೆ. ಇಲ್ಲಿನ ಒಂದೊಂದು ಹೆಜ್ಜೆಯಲ್ಲೂ ಇರುವ ಅವನ ಹೆಜ್ಜೆಗುರುತನ್ನೂ, ಅವನ ಉಸುರಿನ ಪರಿಮಳವನ್ನು, ಬೆವರ ಗಂಧವನ್ನು ಹುಡುಕುತ್ತವೆ. ಒಂದೊಮ್ಮೆ ನಂದನದ ತುಣಕಾಗಿದ್ದ ಈ ಕೋಣೆ, ಈಗ ಯಾಕೆ ಹೀಗೆ ಉಸಿರುಕಟ್ಟಿಸುತ್ತಿದೆ? 'ಅದಾ ಗ್ವಾಡಿ, ಅದಾ ಸೂರು, ದಿನವೆಲ್ಲಾ ಬೇಜಾರು, ತಿದಿಒತ್ತಿ ನಿಟ್ಟುಸಿರು, ಎದಿಯಾಗ ಚುರುಚುರು...' ಅವನು ಬರುವುದರ ಬಗ್ಗೆ ನನಗೆ ಅನುಮಾನವೇ ಇಲ್ಲ, ಬರುತ್ತಾನೆ, ಬರಲೇಬೇಕು. ಆದರೆ, ಈ ಕ್ಷಣ ಬರದೆ ಇರುವುದರ ಮೂಲಕ ಅವನೇನೋ ಹೇಳುತ್ತಿದ್ದಾನೆಯೆ? ಅವನು ಹೇಳುವುದೆ? ಮೊದಲಿನಿಂದಲೂ ಹೇಳುತ್ತಿರುವವಳು ನಾನೇ ಅಲ್ಲವೆ, 'ಮಂಜಿಲ್ ಉನ್ಕಿ, ರಾಸ್ತ ಉನ್ಕಿ, ಕಾರ್‌ವಾನ್ ಉನ್ಕಿ, ಅಬ್ ರಸ್ತಾ ಬದಲ್‌ನೆ ಕಾ ಫೈಸ್ಲಾ ಭೀ ಉನ್ಕಿ' ಹೀಗೇ ಉಳಿದುಬಿಟ್ಟನೆ ಅವ? ಹತ್ತುವರ್ಷಗಳ ಲೆಕ್ಕಾಚಾರದ ಹಾಳೆ ಹಿಡಿದು ಕೂತು ಬ್ಯಾಲೆನ್ಸ್ ಶೀಟ್ ಟ್ಯಾಲಿ ಮಾಡುತ್ತಿದ್ದೇನೆ. ಎಲ್ಲೆಲ್ಲಿ ಇಬ್ಬರೂ ಮಾತನಾಡಿ ನಿರ್ಧಾರ ತೆಗೆದುಕೊಳ್ಳಬೇಕಿತ್ತೋ ಅಲ್ಲೆಲ್ಲಾ ನಾನೊಬ್ಬಳೇ ಮಾತನಾಡಿದ್ದೇನೆ, ಅವನು ಒಪ್ಪಿ ನಡೆದಿದ್ದಾನೆ. ಅದು ಅವನಿಗೆ ಒಪ್ಪಿಗೆ ಇದ್ದೀತು ನಿಜ, ಆದರೆ ಅವನ ಒಪ್ಪಿಗೆಗೂ ಒಂದು ಸ್ವರ ಬೇಕಿತ್ತಲ್ಲವೆ? ಸಂಬಂಧ ಕೈಜಾರುವ ಹೆದರಿಕೆಯಲ್ಲಿ ಅವುಗಳನ್ನು ಕೈಯಾರೆ ಕತ್ತರಿಸಿಕೊಳ್ಳುತ್ತಿರುವೆನೇ ನಾನು? ಕಳೆ ಕೀಳಲೆಂದು ಹೋಗಿ ಬೆಳೆ ಕಿತ್ತ ಪಾಪ ಮಾಡಿದೆನೆ? 'ಒರು ಪಾದಿ ಕದವು ನೀನಡಿ, ಮರು ಪಾದಿ ಕದವು ನಾನಡಿ' ಅವನೊಮ್ಮೆ ಹೇಳಿದ ಹಾಡು ನೆನಪಾಯಿತು, ಅರ್ಧ ಕದ ಅವನು, ಇನ್ನರ್ಧ ಕದ ನಾನು, ಹಾಗಿರುವಾಗ ಒಬ್ಬಳೇ ಹಾಕಿದರೂ, ತೆಗೆದರೂ ಕದ ಕದವಾಗಬಲ್ಲದೆ? ಮತ್ತೆ ಎದ್ದು ಓಡಾಡತೊಡಗಿದೆ. 'ಅವ ಬರುತ್ತಾನೆ', 'ಅವ ಬರುತ್ತಾನೆ' ಜೀವ ಉಳಿಸುವ ಮಂತ್ರದಂತೆ, ಜೀವ ಹಿಡಿದಿಡುವ ಉಚ್ಛ್ವಾಸ ನಿಶ್ವಾಸದಂತೆ, ಅರೆ ಮುಚ್ಚಿದ ಬಾಗಿಲ ಪಟಪಟ ಒದ್ದಾಟದಂತೆ, ಬಂಧನದ ಭೀತಿ, ಬಿಡುಗಡೆಯ ಹೆದರಿಕೆಯಲ್ಲಿ ನ್ಯಾಯಾಧೀಶನ ಎದಿರು ಕೈಕಟ್ಟಿ ಕುಳಿತವಳಂತೆ ಇಡೀ ದಿನ ಕಳೆದೆ. ಸಂಜೆಯಾಗುವಷ್ಟರಲ್ಲಿ ಕೋಣೆಯೊಳಗೆ ಉಸಿರುಕಟ್ಟಿದ ಅನುಭವ. ಇಬ್ಬರೂ ಇರುವಾಗ ಜಗತ್ತಿನಂತೆ ಕಾಣಿಸುತ್ತಿದ್ದ ಕೋಣೆಯೀಗ, ಶವಪೆಟ್ಟಿಗೆಯಷ್ಟು ಇಕ್ಕಟ್ಟಾಗಿದೆ. ಸಮಯ ಜಾರಿದಂತೆ ಒಳಗೆ ಕೂರಲಾರದೆ ಹೊರಗೆ ಬಂದೆ, ಊಟ ಮಾಡುವ ಮನಸ್ಸಿರಲಿಲ್ಲ. ಒಂದು ಗ್ಲಾಸ್ ವೈನ್, ಚೀಸ್ ಎದುರಲ್ಲಿ ಸುಮ್ಮನೆ ಕುಳಿತೆ. '**can I sit here?**' ಥಟ್ಟನೆ ತಲೆ ಎತ್ತಿದೆ, ಒಂದು ಘಳಿಗೆ ನಿಂತ ಹೃದಯ ತಬಲಾ ಮತ್ತು ಡಗ್ಗಾ ಎರಡರ ಜೊತೆಗೂ ಸ್ಪರ್ಧೆಗಿಳಿದಿತ್ತು. ಕಣ್ಣುಗಳಲ್ಲೂ ಒಂದು ಜೀವವನ್ನು ಸ್ಪರ್ಶಿಸಬಹುದು ಎನ್ನುವುದು ಆಗ ಅರಿವಾಯಿತು. '**I am Shiva**' ಎಂದು ಅವನು ಕೈಚಾಚಿದ, ಅವನ ಕಣ್ಣುಗಳಲ್ಲಿ ಎಂದೂ ಅಷ್ಟು ಪ್ರೀತಿಯನ್ನು ಕಂಡಿರಲಿಲ್ಲ ನಾನು, ಅವನ ಕೈಯಲ್ಲಿ ಕೈಯಿಟ್ಟು, ಅವನ ಕಣ್ಣುಗಳಲ್ಲಿ ಕಣ್ಣಿಟ್ಟು, 'ನಾನು ವೆನ್ನೆಲಾ' ಎಂದು ಉಸುರಿದೆ.


**ಎನ್. ಸಂಧ್ಯಾರಾಣಿ**

ಕೋಲಾರ ಜಿಲ್ಲೆಯವರು. ಇತಿಹಾಸದಲ್ಲಿ ಎಂ.ಎ. ಪದವೀಧರೆ. ನಾಟಕ ಮತ್ತು ಸಿನಿಮಾ ವಿಮರ್ಶಕಿ. 'ಅವಧಿ' ಅಂತರ್ಜಾಲ ಪತ್ರಿಕೆಯಲ್ಲಿ ಉಪಸಂಪಾದಕಿಯಾಗಿದ್ದರು. ಪ್ರಕಟಿತ ಪುಸ್ತಕಗಳು: 'ಯಾಕೆ ಕಾಡುತಿದೆ ಸುಮ್ಮನೆ ನನ್ನನು' (ಅಂಕಣ ಬರಹಗಳು), 'ಪಾಂಡಿ ಎನ್ನುವ ರಂಗೋಲಿ' (ಪಾಂಡಿಚೇರಿ ಪ್ರವಾಸ ಕಥನ), 'ತುಂಬೆ ಹೂ' (ನ್ಯೂರೋಸರ್ಜನ್ ಡಾ. ನಾರಾಯಣ ರೆಡ್ಡಿಯವರ ಜೀವನಚರಿತ್ರೆ), 'ಜೋಗಿ ರೀಡರ್' (ಪತ್ರಕರ್ತ ಜೋಗಿ ಬರಹಗಳ ಸಂಪಾದನೆ), 'ಆನು ನಿನ್ನನು ಹಾಡಿದಲ್ಲದೆ ಸೈರಿಸಲಾರೆನಯ್ಯ' (ಬಿ.ವಿ. ಭಾರತಿ ಅವರೊಂದಿಗೆ ಕವನ ಸಂಕಲನ ಸಂಪಾದನೆ). 'ನಾತಿ ಚರಾಮಿ' ಸಿನಿಮಾಕ್ಕೆ ಕತೆ, ಸಂಭಾಷಣೆ ಬರೆದಿದ್ದಾರೆ.